ಚಿಕ್ಕಮಗಳೂರು ತಾಲ್ಲೂಕು ಕಳಸಾಪುರ ಗ್ರಾಮದ ಸುತ್ತಮುತ್ತಲಿನ ಪ್ರದೇಶಕ್ಕೆ ವಿದ್ಯುಚ್ಛಕ್ತಿ

462 - ಶ್ರೀ ಮಲ್ಲಿಕಾರ್ಜುನ ಕೆ.ಬಿ. (ಬೀರೂರು) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಚಿಕ್ಕಮಗಳೂರು ತಾಲ್ಲೂಕು ಕಳಸಾಪುರ ಗ್ರಾಮದ ಸುತ್ತಮುತ್ತ ವಿದ್ಯುತ್ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಹಾಸನ ಜಿಲ್ಲೆ ಜಾವಗಲ್‌ನಲ್ಲಿ ಹೊಸದಾಗಿ ನಿರ್ಮಾಣವಾಗುತ್ತಿರುವ ವಿದ್ಯುತ್ ವಿತರಣಾ ಕೇಂದ್ರದಿಂದ ಈ ಭಾಗಗಳಿಗೆ ವಿದ್ಯುತ್ ಸಂಪರ್ಕ ನೀಡಲು ಸರ್ಕಾರ ಯೋಜಿಸಿದೆಯೇ?*

ಇ) *ಹಾಗಿದ್ದಲ್ಲಿ, ಯಾವಾಗ ಕೆಲಸ ಪ್ರಾರಂಭಿಸಲಾಗುವುದು?*

ಶ್ರೀ ವೀರಕುಮಾರ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಹೌದು, ಬಂದಿದೆ.

ಆ) ಹೌದು.

ಇ) ಜಾವಗಲ್‌ನಲ್ಲಿ ನಿರ್ಮಾಣದ ಹಂತದಲ್ಲಿರುವ 110:11 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್‌ನಿಂದ ಚಿಕ್ಕಮಗಳೂರು ತಾಲ್ಲೂಕಿನ ಕಳಸಾಪುರ ಗ್ರಾಮದ ಸುತ್ತಮುತ್ತಲಿನ ಪ್ರದೇಶಗಳಿಗೆ ವಿದ್ಯುತ್ ಪೂರೈಕೆ ಮಾಡುವ ಸಲುವಾಗಿ ಜಾವಗಲ್‌ನಿಂದ ಕೆ.ಬಿ. ಹಾಳ್ ಗ್ರಾಮದವರೆಗೆ 11 ಕೆ.ವಿ. ಎಕ್ಸ್‌ಪ್ರೆಸ್ ಫೀಡರನ್ನು ನಿರ್ಮಾಣ ಮಾಡಲಾಗುತ್ತದೆ. ಅಲ್ಲದೇ, ಕಳಸಾಪುರದಿಂದ ಬೆಳವಾಡಿ 11 ಕೆ.ವಿ. ಫೀಡರ್‌ಗೆ ಒಂದು 11 ಕೆ.ವಿ. ಲಿಂಕ್ ಲೈನನ್ನು ನಿರ್ಮಾಣ ಮಾಡಲಾಗುತ್ತದೆ. ಜಾವಗಲ್‌ನಲ್ಲಿ 110:11 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್‌ನ ನಿರ್ಮಾಣದ ಕಾರ್ಯವು ಪ್ರಗತಿಯಲ್ಲಿದೆ. ಇದಕ್ಕೆ ಸಂಬಂಧಿಸಿದಂತೆ ಬಾಣಾವರದಿಂದ ಜಾವಗಲ್‌ಗೆ 110 ಕೆ.ವಿ. ವಿದ್ಯುತ್ ಪ್ರಸರಣಾ ಮಾರ್ಗವನ್ನು ನಿರ್ಮಾಣ ಮಾಡುವ ಕಾರ್ಯವೂ ಸಹ ಪ್ರಗತಿಯಲ್ಲಿರುತ್ತದೆ. ಸದರೀ ಸಬ್ ಸ್ಟೇಷನ್ ಮತ್ತು ವಿದ್ಯುತ್ ಪ್ರಸರಣಾ ಮಾರ್ಗಗಳ ನಿರ್ಮಾಣ ಕಾರ್ಯಗಳನ್ನು ಡಿಸೆಂಬರ್ 2000ದ ಅಂತ್ಯದ ವೇಳೆಗೆ ಪೂರ್ಣಗೊಳಿಸುವ ಗುರಿಯನ್ನು ಹೊಂದಿದ್ದು, ಮೇಲ್ಕಂಡ 11 ಕೆವಿ ವಿದ್ಯುತ್ ಲೈನುಗಳ ಕಾಮಗಾರಿಗಳನ್ನೂ ಸಹ ಜೊತೆ ಜೊತೆಯಾಗಿಯೇ ಕೈಗೊಂಡು, ಜಾವಗಲ್‌ನಲ್ಲಿ 110:11 ಕೆವಿ ವಿದ್ಯುತ್ ಸಬ್‌ಸ್ಟೇಷನ್ ಚಾಲನೆಗೊಳ್ಳುವ ಸಮಯದಲ್ಲಿಯೇ ಮೇಲ್ಕಂಡ 11 ಕೆವಿ ವಿದ್ಯುತ್ ಲೈನ್‌ಗಳ ಕಾಮಗಾರಿಯನ್ನು ಪೂರ್ಣಗೊಳಿಸಿ, ವಿದ್ಯುತ್ ಸರಬರಾಜಿನ ವ್ಯವಸ್ಥೆಯನ್ನು ಮಾಡಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುವುದು.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಮಾನ್ಯ ಅಧ್ಯಕ್ಷರೆ, ಜಾವಗಲ್‌ನಿಂದ ಕೆ.ಬಿ. ಹಾಳ್ ಗ್ರಾಮದವರೆಗೆ 11 ಕೆ.ವಿ. ಲೈನನ್ನು ನಿರ್ಮಾಣ ಮಾಡಲಾಗುತ್ತದೆಂದು ಮಾನ್ಯ ಸಚಿವರು ಹೇಳಿದ್ದಾರೆ. ಇದಕ್ಕೆ ಅವಶ್ಯಕವಾಗಿ

ಬೇಕಾಗಿರುವ ತಾಂತ್ರಿಕ ಮಂಜೂರಾತಿಯನ್ನು ನೀಡಲಾಗಿದೆಯೇ? ಇದಕ್ಕೆ ಅಗತ್ಯವಾಗಿರುವ ಹಣದ ಮತ್ತು ಸರಕು ಸಾಮಗ್ರಿಗಳನ್ನು ನೀಡಲಾಗಿದೆಯೇ?

ಶ್ರೀ ವೀರಕುಮಾರ್ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಜಾವಗಲ್‌ನಿಂದ ಕೆ.ಬಿ. ಹಾಳ್‌ವರೆಗಿನ ಮೂರು ಕಿ.ಮೀ. ಉದ್ದದ 110:11 ಕೆ.ವಿ. ಲೈನ್‌ಗೆ 1 ಲಕ್ಷದ 9 ಸಾವಿರ ರೂಪಾಯಿಗಳು ಮಂಜೂರಾಗಿದೆ. From Kalasapur to Belawadi. ಸಾಮಗ್ರಿಯ ಸಲುವಾಗಿ ನಾವು ಈಗಾಗಲೇ ಆರ್ಡರನ್ನೂ ಕೊಟ್ಟಿದ್ದೇವೆ.

ರಾಜ್ಯದಲ್ಲಿ ಕೆ.ಐ.ಎ.ಡಿ.ಬಿ. ವಶಪಡಿಸಿಕೊಂಡಿರುವ ಜಮೀನು

463 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಕೆ.ಐ.ಎ.ಡಿ.ಬಿ.ರವರು ವಶಪಡಿಸಿಕೊಂಡಿರುವ ಜಾಗ ಎಷ್ಟು? (ತಾಲ್ಲೂಕುವಾರು ಮಾಹಿತಿ ನೀಡುವುದು)*

ಆ) *ವಶಪಡಿಸಿಕೊಂಡಿರುವ ಜಾಗಕ್ಕೆ ಎಲ್ಲರಿಗೂ (ಜಾಗ ಕಳೆದುಕೊಂಡಿರುವವರಿಗೆ) ಪರಿಹಾರ ಹಣ ನೀಡಲಾಗಿದೆಯೇ?*

ಇ) *ಹಾಗಿಲ್ಲದಿದ್ದಲ್ಲಿ ಅವರಿಗೆ ಎಂದು ಪರಿಹಾರ ನೀಡಲಾಗುವುದು?*

ಶ್ರೀ ಆರ್.ವಿ. ದೇಶಪಾಂಡೆ (ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) 53,676-18 1/2 ಎಕರೆ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ವಶಪಡಿಸಿಕೊಂಡಿರುವ ಬಹುತೇಕ ಜಮೀನುಗಳಿಗೆ ಪರಿಹಾರಧನ ಪಾವತಿ ಮಾಡಲಾಗಿದೆ.

ಇ) ಭೂಸ್ವಾಧೀನಪಡಿಸಿಕೊಂಡಿರುವ ಜಮೀನುಗಳ ಪೈಕಿ ನ್ಯಾಯಾಲಯದಲ್ಲಿರುವ ಪ್ರಕರಣಗಳು ಇತ್ಯರ್ಥವಾದ ಮೇಲೆ ಪರಿಹಾರಧನ ಪಾವತಿಸಲು ಕ್ರಮಕೈಗೊಳ್ಳಲಾಗುವುದು. ಕೆಲವು ಭೂಮಾಲಿಕರುಗಳಿಗೆ ಪರಿಹಾರ ಹಣ ಪಡೆದುಕೊಂಡು ಹೋಗಲು ನೋಟೀಸ್ ನೀಡಿದಾಗಲೂ ಪರಿಹಾರ ಹಣ ಪಡೆಯಲು ಕೆಲವರು ಮುಂದೆ ಬರುತ್ತಿಲ್ಲ. ಕೆಲವರು ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಇಂತಹ ಪ್ರಕರಣಗಳಲ್ಲಿ ಐತೀರ್ಪು ರಚಿಸಿ, ಹಣವನ್ನು ನ್ಯಾಯಾಲಯಕ್ಕೆ ಜಮಾ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ. ಪ್ರಕರಣಗಳು ಇತ್ಯರ್ಥವಾದ ನಂತರ ಪರಿಹಾರ ಹಣ ನೀಡಲಾಗುವುದು.